

> ಹೂವು ಕಿತ್ತು ಬಿಸಾಡೋದೂ ಒಂದೇ, ಶೀಲ ಕೆಡಿಸೋದೂ ಒಂದೇ...

ಕ್ಲಿಕ್ಕಿಸುತ್ತ ಈ ಅಜ್ಜಿಯ ಜೀವನಾನುಭವಗಳಲ್ಲೇ ಕಳೆದುಹೋದಂತಾಯ್ತು. ಪುಟ್ಟ ಊರಿನಲ್ಲಿ ಕೂತು,

ಚಂದಾದ ಹೂದೋಟ ಚಂದಾಗೆ ಇರುತೈತಿ
ತೋಟಕೆ ಹೋದಾವ
ಹೂವಾ ಕೊಯ್ಯಬೇಡ...
ಕೊಯ್ದು ಹೂವಾ ಮತ್ತೆ ಜೋಡಿಸಾಕೆ
ಆಗದ ಮ್ಯಾಲೆ ನೀ ತೋಟದ ಚಂದಾ ಕೆಡಿಸಬ್ಯಾಡ

ಎಂದು ಹೂವನ್ನು ಹೆಣ್ಣಿಗೆ ಹೋಲಿಸಿ – ಹೂವು ಕಿತ್ತು ಬಿಸಾಡೋದೂ ಒಂದೇ, ಶೀಲ ಕೆಡಿಸೋದೂ ಒಂದೇ... ಎಂದು ಹಾಡಿದ ಸುಕ್ರಜ್ಜಿಗೆ ಹಣದ ಆಶೆ ಇಲ್ಲ. ಹಣದ ದಾಹ ಇರುವವರ ಬಳಿ ಹೆಣದ ವಾಸನೆ ಬರುತ್ತದೆ ಎಂದು ಹೇಳಿ ಯಾವ ಆಸೆ ಹಮ್ಮು ಇಲ್ಲದೇ ಬದುಕುತ್ತಿರುವ ಎಂಬತ್ತ ನಾಲ್ಕು ವರ್ಷ ಹರೆಯದ ಸುಕ್ರಜ್ಜಿಗೆ ಪದ್ಮಶ್ರೀ ಬಂದ ಮೇಲೆ ಓಡಾಟ ಜಾಸ್ತಿಯಾಗಿತ್ತು. ಇದನ್ನೇ ಗಮನಿಸಿ ಊರಿನ ಒಂದಷ್ಟು ಮಂದಿ ಸೇರಿ, ''ಅಜ್ಜಿ, ನಿನಗೊಂದು ಕಾರು ಕೊಡಿಸ್ತೇವೆ. ಅದರಲ್ಲೇ ದೂರದೂರಿಗೆ ಹೋಗಿ ಬಾ'' ಎಂದರೆ, ಸುಕ್ರಜ್ಜಿ, ''ನಾನು ಕಾರಲ್ಲಿ ಹೋಗುವಷ್ಟು ದೊಡ್ಡ ಜನ ಅಲ್ಲ, ಹಾಲಕ್ಕಿ ಜನರೆಲ್ಲಾ ಚಪ್ಪಲಿ ಇಲ್ಲದೇ ದೂರದೂರಿಗೆ ಓಡಾಡುತ್ತಾರೆ, ನಾನೆಂತಕ್ಕೆ ಕಾರಲ್ಲಿ ಹೋಗಲಿ, ನಾನು ಹೀಗೆ ಇದ್ದು ಬಿಡುವೆ'' ಎಂದರಂತೆ. ತನ್ನ ಮನೆಯ ಜಾಗ ಹೋದರೂ ಹೋರಾಡದ ಅಜ್ಜಿ, ಪರಿಸರ ಯೋಜನೆಯಿಂದ ಜಾಗ ಕಳೆದುಕೊಂಡ ನಿರಾಶ್ರಿತರ ಜಾಗ ಹೋದಾಗ ಹೋರಾಡಿದ್ದಾರೆ. ಶಾಲೆಯ ಮೆಟ್ಟಿಲು ಹತ್ತದ ಅಜ್ಜಿ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಜನಪದ ವಿದ್ಯಾರ್ಥಿಗಳಿಗೆ ಜನಪದದ ಪಾಠ ಕಲಿಸಿ ಉಪನ್ಯಾಸಕಿಯೂ ಆದರು.

ಉತ್ಕಟವಾಗಿ ಯಾವ ಕೃತಕತೆ ಇಲ್ಲದೆ ಬದುಕಿದ ಸುಕ್ರಜ್ಜಿಯಂತಹ ಹಿರಿ ಜೀವಗಳೇ ನಮಗೆ ಪಾಠವಾಗಬೇಕು, ದಾರಿಯಾಗಬೇಕು. ಯಾರೇ ಮನೆಗೆ ಬರಲಿ, ಮಾನವೀಯ ಅಂತಃಕರಣದಿಂದ ಮಿಡಿಯುವ, ಬಂದವರ ಮೇಲೆ ಪ್ರೀತಿಯಾದರೆ ಖುಷಿಯಿಂದ ಮುದ್ದಾಡುತ್ತ, ಇವತ್ತು ಇಲ್ಲೇ ಉಳಿದುಕೊಂಡು ಹೋಗಿ ಎನ್ನುವ ಅಜ್ಜಿಯ ಅಕ್ಕರೆಯ ಒಡಲು ಎಂದೂ ಬರಿದಾಗದ ಕಡಲು.

''ನಾವ್ ಹೊರಡುತ್ತೇವೆ. ಯಲ್ಲಾಪುರಕ್ಕೆ ಹೋಗಲಿದೆ'' ಎಂದಾಗ ಅಜ್ಜಿ ಬಿಡಲೇ ಇಲ್ಲ. ಅವಳ ಪ್ರೀತಿ ನಮ್ಮನ್ನು ಕಟ್ಟಿ ಹಾಕಿದರೂ ಬೇರೆ ಉಪಾಯವಿಲ್ಲದೇ ಸುಕ್ರಜ್ಜಿಗೆ ಬೀಳ್ಕೊಟ್ಟಾಗ ಸೂರ್ಯಯ ಕೊನೆಯ ಕಿರಣಗಳು ಸುಕ್ರಜ್ಜಿಯ ಸೆರಗಲ್ಲಿ ಬೆಚ್ಚಗೇ ಮಲಗಿಬಿಟ್ಟಿದ್ದವು. ಎಂಬತ್ತನಾಲ್ಕು ವರ್ಷಗಳಿಂದ ಅಂಕೋಲೆಯಲ್ಲಿ ಸುಕ್ರಜ್ಜಿ ಅದೆಷ್ಟು ಸೂರ್ಯನ ಬೆಳಕನ್ನು, ಮಳೆಯನ್ನು, ಹಸಿರನ್ನು, ತೊನೆದಾಡುವ ಗಾಳಿಯನ್ನು ಹಿಡಿದಿಟ್ಟುಕೊಂಡು ಈಗ ನಮಗೆಲ್ಲಾ ಬೆಳಕಾಗಿರುವಳಲ್ಲ ಅನ್ನಿಸಿತು.

ಚಿತ್ರಗಳು ಲೇಖಕರವು